156ನೆ (84)
4ಪ
31/3/

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ. ಎ. ಶರವಣ ಇವರು ನಿಯಮ 330ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:**

ಸಂಖ್ಯೆ ನಅಇ:189 ಸಿಎಸ್ಎಸ್ 2025 ರಂತೆ ನಗರಾಭಿವೃದ್ಧಿ & ನಗರ ಯೋಜನೆ ಸಚಿವರು ಸದನಕ್ಕೆ ಉತ್ತರಿಸಿರುವಂತೆ ಅಮೃತ್-2.0 ಯೋಜನೆಯಡಿಯಲ್ಲಿ, ರಾಜ್ಯದ 227 ಸಂಖ್ಯೆಯ ಸ್ಥಳೀಯ ಸಂಸ್ಥೆಗಳಲ್ಲಿ ರೂ.9162 ಕೋಟಿಗಳಿಗೆ 216 ಸಂಖ್ಯೆ ಅಂದಾಜನ್ನು ಸಿದ್ಧಪಡಿಸಲಾಗಿದ್ದು, ದಿನಾಂಕ:20.05.2023 ರಿಂದ ಪ್ರಸ್ತುತ ದಿನಾಂಕದವರೆಗೆ ರೂ.6277 ಕೋಟಿಗಳ ಅಂದಾಜು ಮೊತ್ತಕ್ಕೆ 140 ಸಂಖ್ಯೆ ಯೋಜನಾ ವರದಿಗಳಿಗೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿರುವಂತೆ, ಮೇಲಿನ ರೂ.9162 ಕೋಟಿಗಳಲ್ಲಿ, ರಾಜ್ಯ ಸರ್ಕಾರದ ಪಾಲು ಎಷ್ಟು ಹಾಗೂ ಕೇಂದ್ರ ಸರ್ಕಾರದ ಪಾಲು ಎಷ್ಟು ಹಾಗೂ ಕೇಂದ್ರ ಸರ್ಕಾರದ ಅಮೃತ್-2.0 ಯೋಜನೆಯಡಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡುವಾಗ ಆಡಳಿತ ಪಕ್ಷದ ಸದಸ್ಯರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಮಾತ್ರ ಅನುದಾನ ನೀಡಲು ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿವೆಯೇ ಅಥವಾ ರಾಜ್ಯದ ಎಲ್ಲಾ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೂ ಅನುದಾನ ಹಂಚಿಕೆ ಮಾಡಲು ಅವಕಾಶವಿದೆಯೇ ಎಂಬುದರ ಕುರಿತು ಸ್ಪಷ್ಟ ಅಭಿಪ್ರಾಯದೊಂದಿಗೆ ವಿವರವನ್ನು ಒದಗಿಸುವಂತೆ ಹಾಗೂ ಈಗಾಗಲೇ ಮಾನ್ಯ ಸಚಿವರು ಸದನಕ್ಕೆ ನೀಡಿರುವ ಉತ್ತರದಲ್ಲಿ ಕಡತ ಸಂಖ್ಯೆ : ನಅಇ 189 ಸಿಎಸ್ಎಸ್ 2025ರ ಅನುಗುಣವಾಗಿ ಅನುಭಂಧ-2ರಲ್ಲಿ ತಿಳಿಸಿರುವಂತೆ ಈಗಾಗಲೇ ಟೆಂಡರ್ ಅಂತಿಮಗೊಳಿಸಿರುವ 209 ಗುತ್ತಿಗೆದಾರರು ಪಡೆದಿರುವ ಬಿಡ್ ಸಾಮರ್ಥ್ಯದ ಪ್ರಮಾಣ ಪತ್ರಗಳ ಪ್ರತಿಗಳು ಹಾಗೂ ಗುತ್ತಿಗೆ ಪಡೆಯುವಾಗ 209 ಗುತ್ತಿಗೆದಾರರು ಸಲ್ಲಿಸಿರುವ ತಾಂತ್ರಿಕ ಬಿಡ್‌ಗೆ ಸಲ್ಲಿಸಿರುವ ಎಲ್ಲಾ ದಾಖಲೆಗಳ ಪ್ರತಿಗಳನ್ನು ಒದಗಿಸುವಂತೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಬಗ್ಗೆ.

**ಉತ್ತರ:**

ಅಮೃತ್-2.0 ಯೋಜನೆಯಡಿ ಅನುಮೋದನೆಯಾಗಿರುವ 216 ಅಂದಾಜು ಪಟ್ಟಿಯ ರೂ.9162 ಕೋಟಿಗಳಲ್ಲಿ, ಕೇಂದ್ರ ಸರ್ಕಾರದ ಪಾಲು ರೂ. 4581.00 ಕೋಟಿ, ರಾಜ್ಯ ಸರ್ಕಾರದ ಪಾಲು ರೂ. 3664.8 ಕೋಟಿ, ಸ್ಥಳೀಯ ಸಂಸ್ಥೆಗಳ ವಂತಿಕೆ- 916.2 ಕೋಟಿ. ಕೇಂದ್ರ ಸರ್ಕಾರದ ಅಮೃತ್-2.0 ಕಾರ್ಯಕ್ರಮದ ನಿಯಮಾವಳಿಗಳನ್ವಯ City Water Balancing Plan (CWBP)ಗಳನ್ನು ಸ್ಥಳೀಯ ಸಂಸ್ಥೆಗಳಿಂದ ತಯಾರಿಸಿ, ಕೇಂದ್ರ ಸರ್ಕಾರದ ಅಪೆಕ್ಸ್ ಕಮಿಟಿಯಿಂದ ಅನುಮೋದನೆ ಪಡೆದು ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ. ಟೆಂಡರ್ ಅಂತಿಮಗೊಳಿಸಿರುವ 209 ಗುತ್ತಿಗೆದಾರರು ಬಿಡ್ ಸಲ್ಲಿಸುವಾಗ ಪಡೆಯಲಾದ ಬಿಡ್ ಸಾಮರ್ಥ್ಯದ ಪ್ರಮಾಣ ಪತ್ರಗಳ ಪ್ರತಿಗಳನ್ನು ಹಾಗೂ 209 ಗುತ್ತಿಗೆಗಳಿಗೆ ಅಂತಿಮಗೊಂಡಿರುವ ಬಿಡ್ ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿರುವ ದಾಖಲೆಗಳ ಪ್ರತಿಗಳನ್ನು ಹಾರ್ಡ್‌ಡಿಸ್ಕ್‌ನಲ್ಲಿ ನೀಡಿದೆ.

ಸಂಖ್ಯೆ: ನಅಇ 225 ಸಿಎಸ್ಎಸ್ 2025

(ಸಹಿ)

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು